ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ

ಆರೋಗ್ಯ ಸೌಧ ಮಾಗಡಿ ರಸ್ತೆ ಬೆಂಗಳೂರು

ಸಂಖ್ಯೆ:ಎಂ.ಇ.ಬಿ.(3)/82/2023-24 ದಿನಾಂಕ:28.11.2023

## ಸುತ್ತೋಲೆ

ವಿಷಯ: ಅಂಗವಿಕಲತೆಯ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡುವಾಗ ಅನುಸರಿಸಬೇಕಾದ ಮಾನದಂಡಗಳು

ಉಲ್ಲೇಖ: ಉಚ್ಚ ನ್ಯಾಯಾಲಯದ ಆದೇಶ WP No.5622/2022 ದಿ:22.09.2022.

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ವೈದ್ಯಕೀಯ ಪ್ರಮಾಣ ನೀಡುವಾಗ ತಿದ್ದಿ ಬರೆಯುವುದು, ಓದಲು ಸಾಧ್ಯವಾಗದಂತೆ ಬರೆಯುವುದು ಮತ್ತು ಪ್ರಮಾಣ ಪತ್ರದಲ್ಲಿ ನಮೂದಿಸಿದ ಅಂಗವಿಕಲತೆ Calculation Sheet ಲಗತ್ತಿಸದೆ ಇರುವುದು ಕಂಡು ಬಂದಿರುತ್ತದೆ. ಇಂತಹ ಸಂದರ್ಭಗಳಲ್ಲಿ ಇತರೆ ಇಲಾಖೆಗಳ ನೇಮಕಾತಿ ಸಂದರ್ಭದಲ್ಲಿ, ವೈದ್ಯಕೀಯ ರಜೆ ಖಾತರಿಗೊಳಿಸುವ ಸಲುವಾಗಿ, ಸ್ವಯಂ ನಿವೃತ್ತಿ ಸಂದರ್ಭದಲ್ಲಿ, ವೃಂದ ಬದಲಾವಣೆ ಸಂದರ್ಭದಲ್ಲಿ ಮರು ಪರಿಶೀಲನೆಗೆ ಕೋರಿಕೆ ನೀಡುತ್ತಿರುತ್ತಾರೆ

ಇಂತಹ ಸಂದರ್ಭಗಳಲ್ಲಿ ಇತರೆ ವೈದ್ಯಕೀಯ ಮಂಡಳಿಗಳಿಗೆ ನಿರ್ದೇಶಿಸಿದಾಗ [illegible] ಬೋಧಕ ಆಸ್ಪತ್ರೆಯ ವೈದ್ಯಕೀಯ ಮಂಡಳಿಗಳಿಗೆ ನಿರ್ದೇಶಿಸಿದಾಗ ವ್ಯತ್ಯಾಸ ಕಂಡು ಬಂದಿರುತ್ತದೆ. ಕೆಲವು ಸಂದರ್ಭಗಳನ್ನು ಹೊರತು ಪಡಿಸಿ ಅಂಗವಿಕಲತೆಯ ಶೇಕಡವಾರು ಹೆಚ್ಚಿನ ಬದಲಾವಣೆಯಾದಲ್ಲಿ, ವಿಚಾರಣೆಗಾಗಿ ಮೂಲ ಅಂಗವಿಕಲತೆಯ ಪ್ರಮಾಣ ಪತ್ರಕ್ಕೆ ಬೇಕಾದ ಪೂರಕ ದಾಖಲೆಗಳು, ವೈದ್ಯಕೀಯ ಪರೀಕ್ಷೆಗಳ ವಿವರ (ಉದಾ: ಆಡಿಯೋಲಜಿ ವರದಿ, ಎಂಆರ್‌ಐ, Vision Test) ಇತ್ಯಾದಿಗಳು ಆಸ್ಪತ್ರೆಯಲ್ಲಿ ವೈದ್ಯಕೀಯ ದಾಖಲಾತಿಯ ವಿಭಾಗದಲ್ಲಿ ನಿಯಮಾನುಸಾರ ಕಾಯ್ದಿರಿಸಬೇಕಾಗುತ್ತದೆ.

ಮಾನ್ಯ, ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ WP No.5622/2022 ದಿ:22.09.2022 ರ ಆದೇಶದಲ್ಲಿ ಅಂಗವಿಕಲತೆಯ ಸಂಬಂಧ ನೀಡಲಾಗುತ್ತಿರುವ ಹಲವಾರು ವೈದ್ಯಕೀಯ ಮಂಡಳಿ ಪ್ರಮಾಣ ಪತ್ರಗಳನ್ನು ಗ್ರಹಿಸಲು/ಅರ್ಥೈಸಿಕೊಳ್ಳಲು ಆಗುತ್ತಿಲ್ಲ. ಹಲವು ಕಾಲಂಗಳಲ್ಲಿ ಯಾವ ಶಾರೀರಿಕ ಭಾಗಗಳು ಊನವಾಗಿರುತ್ತದೆ ಎಂಬುದನ್ನು ಭರ್ತಿ ಮಾಡದ ಕಾರಣ ಹಾಗೂ ದುರ್ಬಲತೆ/ಧಕ್ಕೆಯಾಗಿರುವ ಬಗ್ಗೆ ಬರವಣಿಗೆಯಲ್ಲಿ ಸ್ಪಷ್ಟತೆ ಇಲ್ಲದಿರುವುದರಿಂದ ವಾದಿ/ಪ್ರತಿವಾದಿಗಳ ವಾದಗಳನ್ನು ಸರಾಗವಾಗಿ ಅರ್ಥೈಸಿಕೊಳ್ಳುವುದರಲ್ಲಿ ಅನಾನುಕೂಲವಾಗುತ್ತಿರುತ್ತದೆ ಎಂದು ಅಭಿಪ್ರಾಯಪಟ್ಟು, ವೈದ್ಯಕೀಯ ಮಂಡಳಿ ಪ್ರಮಾಣ ಪತ್ರಗಳನ್ನು ನೀಡುವಾಗ ಅನುಸರಿಸಬೇಕಾದ ಮಾನದಂಡಗಳನ್ನು ಉಲ್ಲೇಖಿಸಿ ನಿರ್ದೇಶನ ನೀಡಿರುತ್ತದೆ

ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.

28/11/23

1. The details of the affected part of body.
2. The manner in which it is affected and the reason by which it has been affected.
3. When the first affliction occurred.
4. The treatment Protocol followed as regards the said ailment/affliction.
5. Diagnosis in simple layman's Language which could be understood by layman including this court and the lawyer appearing.
6. The Further treatment Protocol Suggested and/or Recommended by the Medical Board.
7. The details of the physical Impairment and/or Mental Disability, including the methodology of Calculation of such Impairment Disability.
8. The future reassessment of the Disability to be conducted and the time frame in which it has to be conducted.

9. The nature of the work which cannot be performed by such workman with reference to the current employment of the workman i.e, in other words to state whether the work which has been done by the workman , presently at his/her posting could be done by said workman or not. If not what kind of work could done by such workman.
10. Schedule 1 of the workmen's Compensation Act 1923 provides for the percentage of loss of earning capacity on the basis of the injuries caused, the same could also be taken into account by the Medical Board.

ಇನ್ನು ಮುಂದ ಅಂಗವಿಕಲತೆಯ ಬಗ್ಗೆ ವೈದ್ಯಕೀಯ ಮಂಡಳಿಯು ನೀಡುವ ಪ್ರಮಾಣ ಪತ್ರಗಳನ್ನು ನೀಡಲಾಗುವ ಸಮಯದಲ್ಲಿ ಅರ್ಜಿ ನಮೂನೆ IV ರಲ್ಲಿನ ಎಲ್ಲಾ ಕಾಲಂಗಳನ್ನು ಸಾಮಾನ್ಯ ಮನುಷ್ಯನಿಗೂ ಅರ್ಥವಾಗುವ ರೀತಿಯಲ್ಲಿ ನಮೂದಿಸಬೇಕೆಂದು ಹಾಗೂ ಸಂಬಂಧಪಟ್ಟ ತಜ್ಞ ವೈದ್ಯರು ವೈದ್ಯಕೀಯ ಪ್ರಮಾಣ ಪತ್ರದಲ್ಲಿ ಅಂಗವಿಕಲತೆಯ ನಿರ್ದಿಷ್ಟತೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.(ref: WP NO:5622/2023)

ಅಂಗವಿಕಲತೆ ದೃಢೀಕರಿಸುವಾಗ ಸಂಬಂಧಪಟ್ಟ ತಜ್ಞ ವೈದ್ಯರು ಮಾತ್ರವೇ ಪ್ರಮಾಣೀಕರಿಸಬೇಕು ಹಾಗೂ ಸಂಬಂಧಪಡದ ತಜ್ಞ ವೈದ್ಯರು ಪ್ರಮಾಣೀಕರಿಸಬಾರದು. ಇದನ್ನು ಹೊರತುಪಡಿಸಿ ಇತರೆ ತಜ್ಞ ವೈದ್ಯರು ಅಂಗವಿಕಲತೆ ಪ್ರಮಾಣಪತ್ರ/ವೈದ್ಯಕೀಯ ರಜೆಗೆ ಶಿಫಾರಸ್ಸು ನೀಡಿದಲ್ಲಿ, ಅದನ್ನು ಅಮಾನ್ಯ ಮಾಡಲಾಗುವುದು. ಹಾಗೂ ಯಾವ ವೈದ್ಯರು ಈ ಸೂಚನೆಗಳನ್ನು ಉಲ್ಲಂಘಿಸುತ್ತಾರೋ ಅವರುಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.

ಸಂಶಯಾಸ್ಪದ ಪ್ರಕರಣಗಳಲ್ಲಿ ಸಂಬಂಧಪಟ್ಟ ವೈದ್ಯಕೀಯ ಮಂಡಳಿಗಳಿಗೆ ಪೂರಕ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಲು ಕೇಳಿದಾಗ ಉದಾ: ಆಡಿಯೋಗ್ರಾಂ, ಎಂಆರ್ಐ, Vision Test )ಇತ್ಯಾದಿಗಳನ್ನು ಎನ್ಎಂಸಿ ಮಾರ್ಗಸೂಚಿಗಳನ್ವಯ ದೃಢೀಕರಿಸುವುದು. ಸದರಿ ತಪಾಸಣೆ ವರದಿಗಳನ್ನು (Investigation Report) ಸಂಬಂಧಪಟ್ಟ ಅಭ್ಯರ್ಥಿ/ಸಿಬ್ಬಂದಿ ಒದಗಿಸಲು ಸಾಧ್ಯವಾಗದೇ ಹೋದಲ್ಲಿ ಅನುಮಾನಸ್ಪಾದ ಪ್ರಕರಣವೆಂದು ಪರಿಗಣಿಸಿ ಮರು ಪರಿಶೀಲನೆಗೆ ಆದೇಶಿಸಲಾಗುವುದು.

ಲಗತ್ತು:ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರತಿ.

RLP 28/11/25

ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು

ಪ್ರತಿಗಳನ್ನು:

1. ಎಲ್ಲಾ ನಿರ್ದೇಶಕರು & ಡೀನ್, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಇವರಿಗೆ ಮಾಹಿತಿಗಾಗಿ.
2. ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ/ಎಲ್ಲಾ ವೈದ್ಯಕೀಯ ಅಧೀಕ್ಷಕರು, ಕೆ.ಸಿ.ಸಾರ್ವಜನಿಕ ಆಸ್ಪತ್ರೆ ಮಲ್ಲೇಶ್ವರಂ, ಸಾರ್ವಜನಿಕ ಆಸ್ಪತ್ರೆ, ಜಯನಗರ, ಸಾರ್ವಜನಿಕ ಆಸ್ಪತ್ರೆ, ಕೆ.ಆರ್.ಪುರಂ, ಸಾರ್ವಜನಿಕ ಆಸ್ಪತ್ರೆ ಯಲಹಂಕ, ಸರ್.ಸಿ.ವಿ.ರಾಮನ್ ಸಾರ್ವಜನಿಕ ಆಸ್ಪತ್ರೆ, ಇಂದಿರಾನಗರ ಇವರಿಗೆ ಮಾಹಿತಿಗಾಗಿ.
3. ಕಛೇರಿ ಪ್ರತಿ.

Madhu